ದಿನಾಂಕಃ 18-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** ವಾದಿ ಪರ ವಕೀಲರಿಂದ,

1) ನಾನು ವೈಯಕ್ತಿಕವಾಗಿ ಯಾವುದೇ ಆಸ್ತಿಯನ್ನು ಮಾಡಿರುವುದಿಲ್ಲ. ಒಟ್ಟು ಕುಟುಂಬದ ಪರವಾಗಿ ಆಸ್ತಿಯನ್ನು ಮಾಡಿರುತ್ತೇವೆ. ನಿಶಾನೆ ಡಿ-2 ಕ್ರಯ ಪತ್ರಕ್ಕೆ ವಾದಿಗಳ ಕುಟುಂಬದ ಎಲ್ಲ ಸದಸ್ಯರ ಸಹಿಗಳನ್ನು ಪಡೆದುಕೊಂಡಿರುತ್ತೇವೆ. ನನ್ನ ತಂದೆಯ ಹೆಸರು ಶಿವನಂಜಪ್ಪ ಎಂದರೆ ಸರಿ. 1978 ನೇ ಸಾಲಿನ ಪಹಣಿ ಪತ್ರಿಕೆಗಳಲ್ಲಿ ವಾದಿಯ ತಾತ ದೊಡ್ಡಯ್ಯ ರವರ ಹೆಸರು ನಮೂದು ಆಗಿರುತ್ತದೆ ಎಂದರೆ ಸರಿಯಲ್ಲ. ಆಕಾರ ಬಂದ್ ದಾಖಲೆಯಲ್ಲಿ ಒಟ್ಟು ವಿಸ್ತೀರ್ಣ 5 ಎಕರೆ 33 ಗುಂಟೆ ಎಂದು ನಮೂದು ಇರುತ್ತದೆ ಎಂದರೆ ಸರಿ. ಸದರಿ ದಾಖಲೆಯಲ್ಲಿ ವಾದಿಯ ತಾತ ದೊಡ್ಡಯ್ಯ ರವರ ಹೆಸರು ನಮೂದು ಆಗಿತ್ತು ಎಂದರೆ ಸರಿಯಲ್ಲ.

2) ನಾನು ದಾವಾ ಆಸ್ತಿಗೆ ಸಂಬಂಧಿಸಿದಂತೆ ಋಣಭಾರ ರಾಹಿತ್ಯ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತೇನೆ. ಸದರಿ ದಾಖಲೆಯಲ್ಲಿ ಆಸ್ತಿ ನನ್ನ ತಂದೆಗೆ ವರ್ಗಾವಣೆ ಆಗಿರುವ ಬಗ್ಗೆ ನಮೂದು ಇಲ್ಲ ಎಂದರೆ ಸರಿಯಲ್ಲ. ವಾದಿಗಳ ತಾತನ ಹೆಸರು 1981 ನೇ ಸಾಲಿನಲ್ಲಿ ಪಹಣಿ ಪತ್ರಿಕೆಯಲ್ಲಿ ನಮೂದು ಆಗಿತ್ತು ಎಂದರೆ ಸರಿಯಲ್ಲ. ನಿಶಾನೆ ಡಿ-1 ರಿಂದ 4 ದಾಖಲೆಗಳನ್ನು ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ವಾದಿಗಳು ಬಡವರಾಗಿರುತ್ತಾರೆ ಎಂದರೆ ಸರಿಯಲ್ಲ.

3) ಕಂದಾಯ ದಾಖಲಾತಿಗಳಲ್ಲಿ ಸಾಕಷ್ಟು ತಿದ್ದುಪಡಿಗಳು ಆಗಿರುತ್ತವೆ ಎಂದರೆ ಸರಿಯಲ್ಲ. ನಿಶಾನೆ ಡಿ-9 ದಾಖಲೆಯ ಪ್ರಕಾರ ತಿದ್ದುಪಡಿಗಳು ಆಗಿರುತ್ತವೆ ಎಂದರೆ ಸರಿಯಲ್ಲ. ವಾದಿಗಳ ಆಸ್ತಿಗಳನ್ನು ಲಪಟಾಯಿಸುವ ಉದ್ದೇಶದಿಂದ ನಾನು ಸುಳ್ಳು ನಾನು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ